**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 1049/2022**

| | | | |
|---|---|---|---|
| **ಹೆಸರು** | : | **ಅರುಣಕುಮಾರ** | ಚಾ.ಸಾ. 11 |
| **ತಂದೆಯ ಹೆಸರು** | : | **ಭೀಮರಾವ** | ಪ್ರಾ.ಸಾ. 5 |
| **ವಯಸ್ಸು** | : | **55 ವರ್ಷ** | ದಿನಾಂಕಃ 16-04-2025 |
| **ಉದ್ಯೋಗ** | : | **ಗುಮಾಸ್ತ** | |
| **ವಾಸಸ್ಥಳ** | : | **ಹರಿಜಂಬಗಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ರಾಜಶೇಖರ ರವರು ನನಗೆ ಗೊತ್ತು. ಅವರು ನಮ್ಮ ಲಾರಿಯ ಮಾಲೀಕರು. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು. ಮೃತ ಶ್ರೀಕಾಂತ ರವರು ಸಹ ನನಗೆ ಗೊತ್ತು. ಚಾಸಾ 1, 5 ಮತ್ತು 6 ರವರು ನನಗೆ ಗೊತ್ತು.

ಈಗ ನೋಡುತ್ತಿರುವ ನಿಪಿ 15 ರ ದಾಖಲೆಯಲ್ಲಿ ನನ್ನ ಸಹಿ ಇದೆ. ನನ್ನ ಸಹಿಯನ್ನು ನಿಪಿ-15(ಬಿ) ಎಂದು ಗುರುತಿಸಲಾಯಿತು.

ಲಾರಿ ಸಂಖೆ MS 24 J 7922 ವಾಹನವನ್ನು ನ್ಯಾಯಾಲಯದ ಮುಂದೆ ಇರುವ ಆರೋಪಿ ಚಲಾಯಿಸುತ್ತಿದ್ದಾಗ ಸುಲೇಪೆಟೇ ಹತ್ತಿರ ಅಪಘಾತವಾದ ಕಾರಣ ಪೋಲಿಸರು ಅದನ್ನು ಜಪ್ತಿ ಮಾಡಿದು ನಾನು ನಿಪಿ 15 ರ ದಾಖಲೆಯನ್ನು ಬರೆದಕೊಟ್ಟು ಸದರಿ ವಾಹನವನ್ನು ಪೋಲಿಸರಿಗೆ ಪಡೆದಿದ್ದೆನೆ. ಸದರಿ ಲಾರಿ ಒಂದು ಆಟೋಗೆ ಡಿಕ್ಕಿ ಮಾಡಿದ ಅಪಘಾತವಾಗಿದೆ. ನಾನು ಹೇಳುತ್ತಿರುವ ಲಾರಿ ಮತ್ತು ಆಟೋ ಈಗ ನೋಡುತ್ತಿರುವ ನಿಪಿ 7 ರ ಭಾವಚಿತ್ರದಲ್ಲಿದೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ತಿಳಿಸಿದ್ದೇನೆಂದರೆ, ಆಟೋ ಲಾರಿಯನ್ನು ಓವರ ಟೇಕ ಮಾಡುವಾಗ ಅದರಲ್ಲಿದ್ದ ವ್ಯಕ್ತಿ ಕೆಳಗಡೆ ಬಿದ್ದ ಕಾರಣ ಅಪಘಾತ ಆಗಿರುತ್ತದೆ. ಸದರಿ ಅಪಘಾತ ದಿನಾಂಕಃ 30-04-2022 ರಂದು ಆಗಿರುತ್ತದೆ. ಈ ರೀತಿ ಪೋಲಿಸರಿಗೆ ಹೇಳಿಕೆ ನೀಡಿದೇನೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಲಾರಿ ಚಾಲಕನಾದ ಆರೋಪಿ ತಪ್ಪಿ ನಿಂದ ಅಪಘಾತ ಆಗಿದೆ ಎಂದು ಪೋಲಿಸರಿಗೆ ಹೇಳಿಕೆ ನೀಡಿದೇನೆ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ  SHH ವಕೀಲರಿಂದಃ</u>**

ಚಾಸಾ 1, 5 ಮತ್ತು 6 ರವರಿಗೆ ಪೋಲಿಸ ಠಾಣೆಯಲ್ಲಿ ನೋಡಿದ್ದೇನೆ ಮತು ಅದಕ್ಕಿಂತ ಮೊದಲು ಅವರು ನನಗೆ ಪರಿಚಯ ಇರಲಿಲ್ಲ ಎಂದರೆ ಸರಿ. ಮೃತಪಟ್ಟ ವ್ಯಕ್ತಿ ನನಗೆ ಪರಿಚಯವಿಲ್ಲ ಎಂದರೆ ಸರಿ. ರಾಜಶೇಖರ ರವರ ನನಗೆ ಲಾರಿ ಬಿಡಿಸಿಕೊಂಡು ಬರಲು ಹೇಳಿದ ಕಾರಣ ಬಿಡಿಸಿಕೊಂಡಿದ್ದೇನೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**